ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಮಾತಂವಿ/~~20~~ 01/ಎಡುಸ್ಯಾಟ್/2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 12.01.2018

## ಸುತ್ತೋಲೆ

ವಿಷಯ: ಎಜುಸ್ಯಾಟ್‌ನಲ್ಲಿ ಕಾರ್ಯಕ್ರಮದ ಕುರಿತು.

******

ವ್ಯಕ್ತಿತ್ವ ನಿರ್ಮಾಣ, ಕಂಪ್ಯೂಟರ್ ಕುರಿತ ಮೂಲಭೂತ ವಿಷಯಗಳು, ಇಂಗ್ಲಿಷ್ ಭಾಷೆಯಲ್ಲಿ ಸಂವಾದದ ಇತ್ಯಾದಿ ಉಪಯುಕ್ತ ವಿಷಯಗಳ ಕುರಿತು ಉಪಗ್ರಹ ಆಧಾರಿತ ಎಜುಸ್ಯಾಟ್ ಕಾರ್ಯಕ್ರಮ ದಿನಾಂಕ: 03-01-2018ರಿಂದ ವಾರಾಂತ್ಯಗಳು ಮತ್ತು ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಪ್ರತಿನಿತ್ಯ ಪ್ರಸಾರಗೊಳ್ಳುತ್ತಿವೆ. ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮದ ಪೂರ್ಣ ಪ್ರಯೋಜನ ಪಡೆದುಕೊಳ್ಳುವಂತೆ ಕಾಲೇಜಿನ ಪ್ರಾಂಶುಪಾಲರು ಮತ್ತು ಎಜುಸ್ಯಾಟ್ ಕಾರ್ಯಕ್ರಮದ ಸಮನ್ವಯಾಧಿಕಾರಿಗಳು ಸೂಕ್ತ ಕ್ರಮ ವಹಿಸತಕ್ಕದ್ದು. ಕಾರ್ಯಕ್ರಮ ಸ್ವೀಕರಣಾ ಉಪಕರಣಗಳನ್ನು **(Receive only Terminal–ROT equipment)** ಅನುಸ್ಥಾಪಿಸಿರುವ 327 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ವಿದ್ಯಾರ್ಥಿಗಳ ವೀಕ್ಷಣಾ ಹಾಜರಾತಿ ಮಾಹಿತಿಯನ್ನು ಗೂಗಲ್ ಫಾರಂಗಳ ಮೂಲಕ ಇಲಾಖೆಗೆ ಕಡ್ಡಾಯವಾಗಿ ಹಾಗೂ ನಿಯಮಿತವಾಗಿ ಕಳುಹಿಸತಕ್ಕದ್ದು ಎಂದು ದಿನಾಂಕ: 07-09-2017ರ ಸುತ್ತೋಲೆಯ ಮೂಲಕ ಸೂಚಿಸಿದ್ದಾಗ್ಯೂ ಬಹು ಸಂಖ್ಯೆಯ ಕಾಲೇಜುಗಳು ಸದರಿ ಮಾಹಿತಿಯನ್ನು ಇಲಾಖೆಗೆ ಸಲ್ಲಿಸುವಲ್ಲಿ ವಿಫಲಗೊಂಡಿವೆ. ಎಜುಸ್ಯಾಟ್ ಕಾರ್ಯಕ್ರಮದ ಉಪಯುಕ್ತತೆಯನ್ನು ಮಾಪನ ಮಾಡಲು ಈ ಮಾಹಿತಿ ಅತ್ಯಗತ್ಯವಾಗಿದ್ದು, ಕಾಲೇಜುಗಳು ಪ್ರತಿ ತಿಂಗಳೂ ತಪ್ಪದೆ ವಿದ್ಯಾರ್ಥಿಗಳ ವೀಕ್ಷಣಾ ಹಾಜರಾತಿ ಮಾಹಿತಿಯನ್ನು ಗೂಗಲ್ ಫಾರಂಗಳ ಮೂಲಕ ಇಲಾಖೆಗೆ ಕಳುಹಿಸತಕ್ಕದ್ದು.

ಹಲವು ಕಾಲೇಜುಗಳಲ್ಲಿ ಕಾರ್ಯಕ್ರಮ ಸ್ವೀಕರಣಾ ಉಪಕರಣಗಳನ್ನು **(Receive only Terminal–ROT equipment)** ಸ್ಥಗಿತಗೊಂಡಿರುವುದಾಗಿ ದೂರುಗಳು ಇಲಾಖೆಯನ್ನು ತಲುಪುತ್ತಿದ್ದು, ಈ ಉಪಕರಣಗಳನ್ನು ಕೂಡಲೇ ಕಾಲೇಜಿನ ಹಂತದಲ್ಲೇ ಸರಿಪಡಿಸಿಕೊಳ್ಳಬೇಕೆಂದು ದಿನಾಂಕ: 07-09-2017ರ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಎಜುಸ್ಯಾಟ್ ಉಪಕರಣವನ್ನು set ಮಾಡುವ ವಿಧಾನವನ್ನೂ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ **ROT equipment** ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣ ನೀಡಿ, ಎಜುಸ್ಯಾಟ್ ವೀಕ್ಷಣೆಯ ಅವಕಾಶವನ್ನು ನಿರಾಕರಿಸುವುದು ಅಂಗೀಕಾರಾರ್ಹವಾಗುವುದಿಲ್ಲ ಎಂಬ ಅಂಶವನ್ನು ಪ್ರಾಂಶುಪಾಲರ ಗಮನಕ್ಕೆ ತರಲಾಗಿದೆ. ಎಜುಸ್ಯಾಟ್ ಕಾರ್ಯಕ್ರಮದ ಯಶಸ್ವೀ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಇರಬಹುದಾದ ಸಲಹೆ ಸೂಚನೆಗಳನ್ನು ಇಲಾಖೆಯ ಎಜುಸ್ಯಾಟ್ ಇ-ಮೇಲ್ ವಿಳಾಸಕ್ಕೆ (dce.edusat2018@gmail.com) ಕಳುಹಿಸತಕ್ಕದ್ದು.

ಕಾಲೇಜು ಶಿಕ್ಷಣ ನಿರ್ದೇಶಕರು
ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು.

**ಇವರಿಗೆ,**

1. ಸಂಬಂಧಪಟ್ಟ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿಗಳು.

*DCE 20 Edusat circular*